# ತಾಮ್ರ ಶಾಸನ

**18**ನೇ ಶತಮಾನದ ಕನ್ನಡ ಮತ್ತು ಪ್ರಾಕೃತ ಸಮ್ಮಿಶ್ರ ಭಾಷೆಯಲ್ಲಿರುವ ಈ ತಾಮ್ರ ಶಾಸನ ಜಯಪುರ ಆದಿನಾಥ ಬಸದಿಯಲ್ಲಿದೆ. ತಾಮ್ರದ ಹಾಳೆಯನ್ನು ಬಿಸಿ ಮಾಡಿ ಬಿಸಿ ಆರುವ ಮೊದಲೇ ಅದರಲ್ಲಿ ಅಕ್ಷರಗಳನ್ನು ಕೊರೆದು ತಯಾರಿಸಿದ ಶಾಸನ. ಬಿಸಿಯಲ್ಲಿಯೂ ಮುದ್ದಾದ ಅಕ್ಷರಗಳನ್ನು ಸಾಲಾಗಿ ಕೊರೆದಿರುವುದನ್ನು ಕಾಣಬಹುದು.

**-ನ. ಸುರೇಶ ಕಲ್ಕೆರೆ, ಕೊಪ್ಪ**





# ಪುರಾತನ ಶಾಸನ ಸ್ತಂಭ

**ಸು**ಮಾರು 8ನೇ ಶತಮಾನದ ಈ ಏಕಶಿಲಾ ಶಾಸನ ಕಂಬವು ವಿಶ್ವ ಪರಂಪರೆಯ ಸ್ಮಾರಕಗಳಲ್ಲೊಂದಾದ ಬಾಗಲಕೋಟೆ ಜಿಲ್ಲೆಯ ಪಟ್ಟದಕಲ್ಲಿನ ಐತಿಹಾಸಿಕ ದೇವಾಲಯ ಸಂಕುಲದಲ್ಲಿದೆ.

ಸ್ತಂಭದ ಮೇಲೆ ಪೂರ್ವನಾಗರೀ ಮತ್ತು ಕನ್ನಡ ಹಾಗೂ ತೆಲುಗು ಲಿಪಿಗಳಲ್ಲಿ ಕೆತ್ತಿರುವ ಸಂಸ್ಕೃತ ಶಾಸನವಿದೆ. ಶಾಸನವು ಶಿವ ಮತ್ತು ಹರಗೌರಿಯ ಸ್ತುತಿಯೊಂದಿಗೆ ಆರಂಭಗೊಂಡಿದೆ. ಇಲ್ಲಿನ ದೇವಾಲಯ ಸಂಕುಲಗಳಲ್ಲೊಂದಾಗಿರುವ ಸಂಗಮೇಶ್ವರ ದೇವಾಲಯದಲ್ಲಿ ವಾಸಿಸುತ್ತಿದ್ದ ಜ್ಞಾನ ಶಿವಾಚಾರ್ಯರು ಇದನ್ನು ಸ್ಥಾಪಿಸಿದರೆಂದೂ , ಸಂಗಮೇಶ್ವರ ದೇವಾಲಯವನ್ನು ಚಾಲುಕ್ಯ ವಿಜಯಾದಿತ್ಯನೂ, ವಿರೂಪಾಕ್ಷ ದೇವಾಲಯವನ್ನು 2ನೇ ವಿಕ್ರಮಾದಿತ್ಯನ ಹಿರಿಯ ರಾಣಿಯೂ ಮತ್ತು ಮಲ್ಲಿಕಾರ್ಜುನ ದೇವಾಲಯವನ್ನು ಆತನ ಕಿರಿಯ ರಾಣಿಯೂ ಸ್ಥಾಪಿಸಿದರೆಂಬುದಾಗಿಯೂ ಉಲ್ಲೇಖವಿದೆ.

**- ರಮಣ್ ಶೆಟ್ಟಿ ರೆಂಜಾಳ್, ಮುಂಬೈ**

# ಪ್ಲಾಸ್ಟಿಕ್ ಬುಟ್ಟಿಗಳು...

**ಕಾ**ಲವೊಂದಿತ್ತು... ಹೆಚ್ಚಾಗಿ ಮಹಿಳೆಯರು ಮನೆಯಲ್ಲಿ ಪ್ಲಾಸ್ಟಿಕ್ ವೈರ್‌ನಿಂದ ತಯಾರಿಸಿದ ಬುಟ್ಟಿ, ಬ್ಯಾಗುಗಳನ್ನು ಉಪಯೋಗಿಸುತ್ತಿದ್ದರು. ತಿರುಗಾಟಕ್ಕೆ ಹೋಗಲು, ನೆಂಟರ ಮನೆಗೆ, ದೇವಸ್ಥಾನಕ್ಕೆ, ಅಂಗಡಿಗೆ ಹೋಗುವಾಗಲೆಲ್ಲಾ ಹೆಂಗಳೆಯರ ಪಾಲಿನ ನೆಚ್ಚಿನ ಬ್ಯಾಗ್ ಆಗಿತ್ತು. ಬಾಲ್ಯದ ದಿನಗಳಲ್ಲಿ ಈ ಬ್ಯಾಗ್ ನಮ್ಮ ಪಾಲಿಗೆ ಸದಾ ನೆನಪಿನಲ್ಲಿರುತ್ತಿತ್ತು. ಆದರೀಗ ಕಾಲಚಕ್ರ ಬದಲಾದಂತೆ ಪ್ಲಾಸ್ಟಿಕ್ ಬುಟ್ಟಿಗಳು ಸೇರಿಕೊಂಡಿವೆ. ತೀರ್ಥಹಳ್ಳಿಯ ಫೀನಿಕ್ಸ್ ಕ್ರಿಯೇಷನ್ಸ್ ಪದ್ಮ ಜಾದರಗಲಗೋಡು ತಮ್ಮ ಸಂಸ್ಥೆಯಲ್ಲಿ ಈ ಕ್ರಿಯಾಶೀಲ ಬುಟ್ಟಿಯನ್ನು ಮತ್ತೆ ರೂಪಿಸಿದ್ದಾರೆ.

**- ರಾಂಚಂದ್ರ ಕೊಪ್ಪಲು, ತೀರ್ಥಹಳ್ಳಿ**

